

ಮಂಜುನಾಥ ಹುಲುಕೊಪ್ಪದ

# ಕೆಂಪು ಸ್ವೆಟರ್

■ ಸೋಮಲಿಂಗ ಬೇಡರ ಆಳೂರ

ಚಳಿಗಾಲ ಬಂತಂದ್ರೆ ಸಾಕು ಗೌರಿಗೆ ತುಂಬಾನೆ ಖುಷಿ. ಅದರಲ್ಲೂ ಶನಿವಾರ ದಿನ ಅವಳಿಗೆ ಹಬ್ಬ ಇದ್ದಂತೆ. ಆ ದಿವಸ ಹಿಂದಿನ ರಾತ್ರಿ ತಾನು ತೊಡುವ ಬಿಳಿ ಯೂನಿಫಾರಂ, ಬೂಟು, ಸಾಕ್ಸ ತನಗಿಷ್ಟವಾದ ಸ್ವೆಟರ್, ಬೆಲ್ಟು, ಟೈ ಎಲ್ಲವನ್ನೂ ಜೋಡಿಸಿಟ್ಟು ಮಲಗುವ ರೂಢಿ ಮಾಡಿಕೊಂಡಿದ್ದಳು.

ಅದೊಂದು ಶನಿವಾರ ಶಾಲೆ ಬೆಳಿಗ್ಗೆ ಇದ್ದುದರಿಂದ ಬೇಗ ಎದ್ದು ಬೆಳಗಿನ ಕ್ರಿಯಾದಿಗಳನ್ನು ಮುಗಿಸಿದಳು. ಸ್ನಾನ ಮಾಡಿ, ಅಚ್ಚ ಬಿಳಿ ಯೂನಿಫಾಂ ಧರಿಸಿ ಅದರ ಮೇಲೆ ತನ್ನ ಅಚ್ಚು ಮೆಚ್ಚಿನ ಕೆಂಪು ಸ್ವೆಟರ್ ತೊಟ್ಟು ದೇವರಿಗೆ ಭಕ್ತಿಯಿಂದ ಕೈ ಮುಗಿದಳು. ಅಷ್ಟರಲ್ಲಿ ಅಮ್ಮ ತಿಂಡಿ ತಯಾರಿಸಿ 'ಗೌರಿ ಉಪ್ಪಿಟ್ಟು ಮಾಡಿದ್ದೀನಿ ಬೇಗ ಬಾ ಅದು ತಣ್ಣಗಾಗುವ ಮುಂಚೆ ತಿನ್ನು' ಎಂದಳು. 'ಆಯ್ತಮ್ಮ ಬಂದೆ' ಎಂದು ಮಗಳು ಬಂದದ್ದು ನೋಡಿ ಅಮ್ಮ ಅವಳಿಗೆ ಮುದ್ದಿನಿಂದ ದೃಷ್ಟಿಬೊಟ್ಟು ಇಟ್ಟಳು. ಗೌರಿ ಉಪ್ಪಿಟ್ಟು ಸೇವಿಸಿ ನೀರು ಕುಡಿದು ಅಮ್ಮನ ಕಾಲಿಗೆ ನಮಸ್ಕರಿಸಿ 'ಅಮ್ಮ ನಾ ಶಾಲೆಗೆ ಹೋಗಿ ಬರ್ತೀನಿ' ಎಂದು ಶೂ ಧರಿಸಿ ಬ್ಯಾಗು ಹೆಗಲಿಗೇರಿಸಿಕೊಂಡು ಶಾಲೆಗೆ ಹೊರಟಳು.

ಮನೆಯಿಂದ ಒಂದು ಕಿಲೋಮೀಟರ್ ಅಂತರದಲ್ಲಿರುವ ಸರಕಾರಿ ಪ್ರೌಢ ಶಾಲೆಗೆ ಗೌರಿ ಬೈಸಿಕಲ್ ಮೇಲೆ ತಣ್ಣನೆಯ ಚಳಿಯನ್ನು ಆಸ್ವಾದಿಸುತ್ತ ಸಾಗುತ್ತಿದ್ದಳು. ಸಮಯ ಏಳು ಗಂಟೆಯಾದರೂ ಇನ್ನೂ ಸೂರ್ಯನ ಬೆಳಕು ಅಷ್ಟಾಗಿ ಮೂಡಿರಲಿಲ್ಲ. ಗೌರಿ ಎಡ ಬಲ ನೋಡುತ್ತ ಸೈಕಲ್ ತುಳಿಯುತ್ತಿದ್ದಳು. ಸ್ವಲ್ಪ ದೂರ ಸಾಗುತ್ತಿದ್ದಂತೆ ಅವಳ ಕಣ್ಣಿಗೆ ಫುಟ್‌ಪಾತಿನ ವಿದ್ಯುತ್ ಕಂಬವೊಂದಕ್ಕೆ ಒರಗಿ ಚಳಿ ತಡೆದುಕೊಳ್ಳಲಾಗದೆ ನಡುಗುತ್ತ ಮುದುರಿ ಕುಳಿತ ಓರ್ವ ಅಜ್ಜಿ ಕಂಡಳು. ಅವಳಿಗೆ ಪಾಪ ಅನ್ನಿಸಿತು. ಸೈಕಲ್ ನಿಲ್ಲಿಸಿ ಅಜ್ಜಿಯ ಹತ್ತಿರ ಹೋಗಿ 'ಅಜ್ಜಿ ನಿನ್ನ ಊರು ಯಾವುದು? ಒಬ್ಬಳೇ ಇಲ್ಲೇಕೆ ಕುಳಿತ್ತಿದ್ದೀಯಾ? ನಿನಗೆ ಯಾರೂ ಇಲ್ವಾ? ಚಳಿ ಆಗ್ತಿದೆಯಾ?' ಎಂದು ಪರಿಪರಿಯಿಂದ ಗೌರಿ ವಿಚಾರಿಸಿದಳು. ಅಜ್ಜಿ ಅವಳ ಯಾವ ಪ್ರಶ್ನೆಗೂ ಉತ್ತರಿಸದೆ ಥರಗುಟ್ಟಿ ನಡುಗುತ್ತಿದ್ದಳು. ಗೌರಿಯ ಮನ ಕಲುಕಿತು. ತಾನು ತೊಟ್ಟಿರುವ ಸ್ವೆಟರ್ ಬಿಚ್ಚಿ ಅಜ್ಜಿಗೆ ತೊಡಿಸಿದಳು. ಅಜ್ಜಿಗೆ ಬೆಚ್ಚಗೆನಿಸಿತು.

ಬೆಳಗಿನ ವಾಯುವಿಹಾರಕ್ಕೆಂದು ಹೋಗಿದ್ದ ಗೌರಿಯ ತಂದೆ ಅದೇ ದಾರಿಯಲ್ಲಿ ನಡೆದು ಬರುವಾಗ ಮಗಳು ಗೌರಿ ಫುಟ್‌ಪಾತಿನಲ್ಲಿರುವುದನ್ನು ಕಂಡು ಹತ್ತಿರ ಹೋಗಿ 'ಯಾಕಮ್ಮ ಗೌರಿ ಶಾಲೆಗೆ ಹೋಗೋದು ಬಿಟ್ಟು ಇಲ್ಲೇನು ಮಾಡುತ್ತಿರುವೆ ಈ ಅಜ್ಜಿ ಯಾರಂತೆ?' ಎಂದರು. 'ಯಾರೋ ಗೊತ್ತಿಲ್ಲ ಅಪ್ಪ, ಚಳಿ ತಡೆದುಕೊಳ್ಳದೆ ನಡುಗ್ತಾ ಕುಳಿತದ್ದು ಕಂಡು ನನಗ್ಯಾಕೋ ಕನಿಕರ ಬಂತು. ನನ್ನ ಸ್ವೆಟರ್ ಕೊಟ್ಟಿದ್ದೀನಿ. ಈಗ ಬೆಚ್ಚಗಾಗಿದ್ದಾರೆ. ಪಾಪ ಈ ಅಜ್ಜಿ ಯಾರಂತ ನೀನಾದರೂ ಕೇಳಿ ನೋಡಪ್ಪ ಪ್ಲೀಜ್' ಎಂದು ಗೌರಿ ಹೇಳಿದಳು.

ಗೌರಿಯ ತಂದೆ ಅಜ್ಜಿಯ ಮುಂದೆ ಕುಳಿತು 'ಯಾರಮ್ಮ ನೀನು ಎಲ್ಲಿಂದ ಬಂದಿರುವೆ' ಎಂದರು. ಅಜ್ಜಿಗೆ ಯಾವುದೋ ಪರಿಚಿತ ಧ್ವನಿ ಕೇಳಿದಂತೆನಿಸಿತು. ಮೆಲ್ಲನೆ ಮುಖ ಮೇಲೆತ್ತಿ ನೋಡಿದಳು. ಆ ತಂದೆಯ ಎದೆ ಝಲ್ ಎಂದಿತು! ಅಜ್ಜಿ ಅವರ ಸ್ವಂತ ತಾಯಿಯಾಗಿದ್ದಳು! 'ಅಮ್ಮಾ ನೀನು ಇಲ್ಲಿಗೆ ಹೇಗೆ ಬಂದೆ... ನನ್ನನ್ನು ಕ್ಷಮಿಸಮ್ಮ...' ಎಂದು ಅಳುತ್ತ ಅಂಗಲಾಚಿ ಬೇಡಿಕೊಂಡರು. ಗೌರಿ ಅಪ್ಪನನ್ನು ಸಮಾಧಾನ ಪಡಿಸುತ್ತ 'ಈ ಅಜ್ಜಿ ನನ್ನ ಸ್ವಂತ ಅಜ್ಜಿನಾ? ಇಷ್ಟು ದಿನ ಎಲ್ಲಿದ್ದಳು' ಎಂದಳು. 'ದೂರದ ಊರಿನಲ್ಲಿರುವ ಅನಾಥಾಶ್ರಮದಲ್ಲಿ ಬಿಟ್ಟು ಬಂದಿದ್ದೆ. ಹತ್ತು ವರ್ಷ ಕಳೆದಿವೆ. ಈಗ ಅವಳನ್ನು ನೋಡುತ್ತಿದ್ದೇನೆ. ತಪ್ಪು ಅನಿಸ್ತಿದೆ ಮಗಳೆ, ನೀನು ಶಾಲೆಗೆ ಹೋಗಿ ಬಾ. ಮನೆಗೆ ಬಂದ ಮೇಲೆ ಎಲ್ಲಾ ವಿಷಯ ತಿಳಿಸುತ್ತೇನೆ' ಎಂದರು. ಗೌರಿ ಶಾಲೆಗೆ ಹೊರಟಳು. ಅಪ್ಪ ತನ್ನ ತಾಯಿಯನ್ನು ಕರೆದುಕೊಂಡು ಮನೆಗೆ ಹೋದರು.

ಗೌರಿ ಶಾಲೆಗೆ ಬರುವಷ್ಟರಲ್ಲಿ ಪ್ರಾರ್ಥನೆ ಮುಗಿದು ಮೊದಲನೇ ಅವಧಿ ಪ್ರಾರಂಭವಾಗಿತ್ತು. ಬಾಗಿಲಲ್ಲಿ ಒಳಗೆ ಹೋಗಲು ಅನುಮತಿಗಾಗಿ ಕಾದು ನಿಂತಿರುವ ಗೌರಿಯನ್ನು ಕಂಡ ಗುರುಗಳು 'ಬಾರಮ್ಮ ಇವತ್ತು ಯಾಕೋ ತಡವಾಯಿತಲ್ಲ? ನಿನ್ನ ಮೆಚ್ಚಿನ ಸಂಗಾತಿ ಕೆಂಪು ಸ್ವೆಟರ್ ಎಲ್ಲಿ?' ಎಂದು ಚೇಷ್ಟೆ ಮಾಡಿದರು. 'ತೊಟ್ಟುಕೊಂಡು ಬಂದಿದ್ದೆ ಸರ್, ದಾರಿಯಲ್ಲಿ ನಮ್ಮ ಅಜ್ಜಿ ಚಳಿಯಿಂದ ನಡುಗುತ್ತಾ ಕುಳಿತಿದ್ದಳು. ಅವಳಿಗೆ ಕೊಟ್ಟು ಬಂದೆ' ಎಂದು ದಾರಿಯಲ್ಲಿ ನಡೆದ ವಿಷಯ ತಿಳಿಸಿದಳು. ಅಂತೂ ನಿನ್ನ ಕೆಂಪು ಸ್ವೆಟರ್ ಕರುಳು ಬಳ್ಳಿಗಳನ್ನು ಒಂದುಗೂಡುವ ಹಾಗೆ ಮಾಡಿತು. ಇದು ಸಂತೋಷದ ಸಂಗತಿ ಎಂದರು. ಮಕ್ಕಳು ಜೋರಾಗಿ ಚಪ್ಪಾಳೆ ತಟ್ಟಿದರು. ■